# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1340** |
| **ಸದಸ್ಯರ ಹೆಸರು** | : | **ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **19.03.2025** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಷ್ಟು ಪಶು ಆಸ್ಪತ್ರೆಗಳಿವೆ: ಹಾಗೂ ಈ ಆಸ್ಪತ್ರೆಗಳಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ; (ವಿವರ ನೀಡುವುದು)</td><td>ಕಲಬುರ್ಗಿ ಜಿಲ್ಲೆಯಲ್ಲಿ 217 ಮತ್ತು ಯಾದಗಿರಿ ಜಿಲ್ಲೆಯಲ್ಲಿ 99 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಪಶುವೈದ್ಯಕೀಯ ಸಂಸ್ಥೆ</th><th>ಕಲಬುರ್ಗಿ</th><th>ಯಾದಗಿರಿ</th></tr>
<tr><td>1</td><td>ಸೂಪರ್ ಸ್ಪೆಷಾಲಿಟಿ/ ಸ್ಪೆಷಾಲಿಟಿ</td><td>1</td><td>0</td></tr>
<tr><td>2</td><td>ಪಾಲಿ ಕ್ಲಿನಿಕ್</td><td>0</td><td>1</td></tr>
<tr><td>3</td><td>ಪಶು ಆಸ್ಪತ್ರೆ</td><td>29</td><td>14</td></tr>
<tr><td>4</td><td>ಪಶು ಚಿಕಿತ್ಸಾಲಯ</td><td>112</td><td>42</td></tr>
<tr><td>5</td><td>ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ</td><td>68</td><td>39</td></tr>
<tr><td>6</td><td>ಸಂಚಾರಿ ಪಶುಚಿಕಿತ್ಸಾಲಯ</td><td>7</td><td>3</td></tr>
<tr><td></td><td>ಒಟ್ಟು</td><td>217</td><td>99</td></tr>
</table>
ಕಲಬುರ್ಗಿ ಜಿಲ್ಲೆಯಲ್ಲಿ 832 ಮತ್ತು ಯಾದಗಿರಿ ಜಿಲ್ಲೆಯಲ್ಲಿ 378 ಹುದ್ದೆಗಳು ಮಂಜೂರಾಗಿವೆ. (ವಿವರ <u>ಅನುಬಂಧ</u>ದಲ್ಲಿ ನೀಡಲಾಗಿದೆ)</td></tr>
</table>

| | | |
|---|---|---|
| ಆ) | ಸದರಿ ಜಿಲ್ಲೆಗಳಲ್ಲಿ ಹೊಸದಾಗಿ ಪಶು ಆಸ್ಪತ್ರೆ ಆರಂಭಿಸಲು ಬೇಡಿಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಹೊಸ ಪಶು ಆಸ್ಪತ್ರೆಯನ್ನು ಮಂಜೂರು ಮಾಡಲಾಗುವುದು; | ಕಲಬುರಗಿ ಜಿಲ್ಲೆಯಲ್ಲಿ 27 ಹಾಗೂ ಯಾದಗಿರಿ ಜಿಲ್ಲೆಯಲ್ಲಿ 11 ನೂತನ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ಕೋರಿ ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ.<br><br>2025-26ನೇ ಸಾಲಿನಲ್ಲಿ 50 ನೂತನ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಘೋಷಿಸಲಾಗಿರುತ್ತದೆ. ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ 38 ಪ್ರಸ್ತಾವನೆಗಳು ಸೇರಿದಂತೆ ಸ್ವೀಕೃತಗೊಂಡ ರಾಜ್ಯದ 631 ಗ್ರಾಮಗಳ ನೂತನ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ಕೋರಿರುವ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು. ಆದ್ಯತೆ ಮತ್ತು ಅಗತ್ಯತೆಗನುಗುಣವಾಗಿ ಮಂಜೂರು ಮಾಡಲು ಪರಿಶೀಲಿಸಬೇಕಿರುತ್ತದೆ. |
| ಇ) | ಪಶುಗಳಿಗೆ ತಗಲುವ ಕಾಲುಬಾಯಿ ಜ್ವರದ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು? | ಪಶುಗಳಿಗೆ ತಗಲುವ ಕಾಲುಬಾಯಿ ಜ್ವರದ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, NADCP ಯೋಜನೆಯಡಿ ರಾಜ್ಯದ ಎಲ್ಲಾ ಹಳ್ಳಿಗಳಲ್ಲಿ ರೈತರ ಮನೆ ಬಾಗಿಲಿನಲ್ಲಿ ಕಾಲುಬಾಯಿ ರೋಗ ಲಸಿಕಾ ಕಾರ್ಯಕ್ರಮವನ್ನು ಪ್ರತಿ ಆರು ತಿಂಗಳಿಗೊಮ್ಮೆ ಅಭಿಯಾನದ ಮಾದರಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.<br><br>2019-20ನೇ ಸಾಲಿನಿಂದ ಇಲ್ಲಿಯವರೆಗೆ NADCP ಯೋಜನೆಯಡಿಯಲ್ಲಿ ಒಟ್ಟು 6 ಸುತ್ತುಗಳಲ್ಲಿ ಒಟ್ಟು 5,94,40,000 ಜಾನುವಾರುಗಳಿಗೆ ಕಾಲುಬಾಯಿ ರೋಗ ನಿರೋದಕ ಲಸಿಕೆ ಹಾಕಲಾಗಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತದೆ. |

| ಕ್ರ.ಸಂ | ಸುತ್ತುಗಳ ವಿವರ | ಲಸಿಕೆ ಹಾಕಲಾದ ಜಾನುವಾರುಗಳ ಸಂಖ್ಯೆ ಲಕ್ಷಗಳಲ್ಲಿ |
|---|---|---|
| 1 | 1ನೇ ಸುತ್ತು | 96.28 |
| 2 | 2ನೇ ಸುತ್ತು | 99.45 |
| 3 | 3ನೇ ಸುತ್ತು | 100.7 |
| 4 | 4ನೇ ಸುತ್ತು | 100.84 |
| 5 | 5ನೇ ಸುತ್ತು | 99.07 |
| 6 | 6ನೇ ಸುತ್ತು | 98.06 |
| | **ಒಟ್ಟು** | **594.40** |

| | | |
|---|---|---|
| | | ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮದ ಬಗ್ಗೆ posters Banner, handbills, pamphpletsಗಳನ್ನು ವಿತರಿಸುವ ಮೂಲಕ ಹಾಗೂ ಕೇಂದ್ರ ಸರ್ಕಾರವು ಅಭಿವೃದ್ಧಿಪಡಿಸಿದ ವೀಡಿಯೋಗಳ ಮೂಲಕ ಜಾಗೃತಿ ಮೂಡಿಸಲಾಗಿದೆ. ರೇಡಿಯೋ, ದಿನಪತ್ರಿಕೆಗಳು, ಕರಪತ್ರಗಳು, ಬಸ್‌ನಿಲ್ದಾಣ, ಹಾಗೂ ಬಸ್ಸುಗಳ ಮೇಲೆ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಲಸಿಕಾ ಕಾರ್ಯಕ್ರಮದ ಅಭಿಯಾನದ ಸಮಯದಲ್ಲಿ ಇಲಾಖೆಯಲ್ಲಿರುವ ಕ್ಷೇತ್ರ ಮಟ್ಟದ ವಾಹನಗಳಲ್ಲಿ ಧ್ವನಿವರ್ದಕಗಳನ್ನು ಅಳವಡಿಕೊಂಡು ಪ್ರಚಾರ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ:ಪಸಂಮೀ 90 ಸಲೆವಿ 2025**

**(ಕೆ.ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

# ಅನುಬಂಧ

| ಕ್ರ. ಸಂ. | ಮಂಜೂರಾದ ಹುದ್ದೆಗಳ ವಿವರ | ಕಲಬುರ್ಗಿ | ಯಾದಗಿರಿ |
|---|---|---|---|
| 1 | ಉಪನಿರ್ದೇಶಕರು | 1 | 1 |
| 2 | ಮುಖ್ಯಪಶುವೈದ್ಯಾಧಿಕಾರಿ (ಆಡಳಿತ) | 7 | 3 |
| 3 | ಮುಖ್ಯಪಶುವೈದ್ಯಾಧಿಕಾರಿ | 18 | 11 |
| 4 | ಹಿರಿಯ ಪಶುವೈದ್ಯಾಧಿಕಾರಿ | 23 | 9 |
| 5 | ಪಶುವೈದ್ಯಾಧಿಕಾರಿ | 104 | 39 |
| 7 | ಜಾನುವಾರು ಅಭಿವೃದ್ಧಿ ಅಧಿಕಾರಿ | 7 | 3 |
| 9 | ಜಾನುವಾರು ಅಧಿಕಾರಿ | 23 | 12 |
| 10 | ಪ್ರಥಮ ದರ್ಜೆ ಸಹಾಯಕರು | 1 | 2 |
| 11 | ದ್ವಿತೀಯ ದರ್ಜೆ ಸಹಾಯಕರು | 6 | 2 |
| 12 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 92 | 45 |
| 13 | ಪಶುವೈದ್ಯಕೀಯ ಪರೀಕ್ಷಕರು | 91 | 39 |
| 14 | ಪಶುವೈದ್ಯಕೀಯ ಸಹಾಯಕರು | 104 | 52 |
| 15 | ಲ್ಯಾಬ್‌ಟೆಕ್ನೀಷಿನ್ | 0 | 1 |
| 17 | ವಾಹನಚಾಲಕರು | 7 | 4 |
| 18 | ಡಿ-ದರ್ಜೆ ನೌಕರರು | 348 | 155 |
| | **ಒಟ್ಟು:** | **832** | **378** |

ನಿರ್ದೇಶಕರು